ಸಾಕ್ಷಿಯನ್ನು ತಾ:- 03.02.2024 ರಂದು ಕರೆದು ಪ್ರಮಾಣ ಮಾಡಿಸಲಾಯಿತು. ಆರ್.ಡಬ್ಲ್ಯೂ.-1

**ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಿಂದ:-**

**1.** ನನ್ನ ಮುಖ್ಯ ವಿಚಾರಣೆ ಸಂಗತಿಗಳು ನನಗೆ ಗೊತ್ತಿದೆ. ನನ್ನ ಮುಖ್ಯ ವಿಚಾರಣೆ ಸಂಗತಿಗಳನ್ನು ಸೃಷ್ಠಿ ಮಾಡಿ ಬರೆಸಿರುತ್ತೇನೆಂದರೆ ಸರಿಯಲ್ಲ. ನಾವು ಗುರುಹಿರಿಯರ ಸಮಕ್ಷಮ ಮದುವೆಯಾಗಿರುತ್ತೇವೆ. ಅರ್ಜಿದಾರರು ನನ್ನ ಜೊತೆ ಒಂದು ವರ್ಷ ಸಂಸಾರ ಮಾಡಿರುತ್ತಾರೆಂದರೆ ಸರಿಯಲ್ಲ. ಅರ್ಜಿದಾರರು ನನ್ನನ್ನು 2 – 3 ತಿಂಗಳಿಗೆ ತೊರೆದು ಹೋಗಿರುತ್ತಾರೆ. ನಾನೇ ನನ್ನ ಕುಟುಂಬದವರನ್ನು ಒಪ್ಪಿಸಿ ಅರ್ಜಿದಾರರನ್ನು ಮದುವೆಯಾಗಿರುತ್ತೇನೆಂದರೆ ಸರಿಯಲ್ಲ. ಅರ್ಜಿದಾರರು ನನಗೆ ಊಟದಲ್ಲಿ ವಿಷ ಹಾಕಲು ಪ್ರಯತ್ನ ಮಾಡಿರುತ್ತಾರೆ. ಅರ್ಜಿದಾರಳು ಕಪ್ಪಾಗಿ ಮತ್ತು ದಪ್ಪವಾಗಿ ಇದ್ದ ಕಾರಣ ಅವಳು ನನಗೆ ಇಷ್ಟವಿಲ್ಲವೆಂದು ಹೇಳಿರುತ್ತೇನೆಂದರೆ ಸರಿಯಲ್ಲ. ಅರ್ಜಿದಾರರು ಪೋಲೀಸ್ ಠಾಣೆಯಲ್ಲಿ ದೂರು ನೀಡಿದಾಗ ನಾನು ಅರ್ಜಿದಾರಳನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳಿದರೂ ಸಹ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರಳ ವಿರುದ್ದ ವಿಚ್ಛೇದನ ಅರ್ಜಿ ಸಲ್ಲಿಸಿದ್ದು ಅದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಮದುವೆಯನ್ನು ಅರ್ಜಿದಾರರ ಮನೆಯವರೇ ಮಾಡಿರುತ್ತಾರೆಂದರೆ ಸರಿಯಲ್ಲ. ಅರ್ಜಿದಾರಳ ಮನೆಯವರು ನನಗೆ ಬಂಗಾರದ ಚೈನು, ಉಂಗುರ ಕೊಟ್ಟು ಮದುವೆ ಮಾಡಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ಅರ್ಜಿದಾರಳ ಬಂಗಾರದ ಚೈನು, ಉಂಗುರ ಮತ್ತು ಕಿವಿಯೋಲೆಗಳು ನನ್ನ ಹತ್ತಿರವಿದ್ದು ನಾನು ಅವುಗಳನ್ನು ವಾಪಸ್ಸು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರಳು ಈಗಲೂ ನನ್ನ ಜೊತೆ ಬಾಳ್ವೆ ಮಾಡಲು ತಯಾರಿರುತ್ತಾರೆಂದರೆ ಸಾಕ್ಷಿಯು ನನಗೆ ಅರ್ಜಿದಾರಳು ಬೇಡ ಎಂದು ನುಡಿಯುತ್ತಾರೆ. ನಾನು ಅರ್ಜಿದಾರಳ ವಿರುದ್ದ ಯಾವುದೇ ದೂರು ಕೊಟ್ಟಿಲ್ಲ. ನಾನು ಅರ್ಜಿದಾರಳನ್ನು ಕಡೆಗಣಿಸಿರುತ್ತೇನೆಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ

ಮಳವಳ್ಳಿ